ನಿಮ್ಮೊಡನೆ

# ಬದುಕಿನ ಗುಣಮಟ್ಟ ಕಸಿಯದಿರಿ

ಆದಾಯದ ಮೂಲಗಳು ಬತ್ತಿರುವ ಈ ಹೊತ್ತಿನಲ್ಲಿ ಬೆಲೆ ಏರಿಕೆ ಹೀಗೇ ಮುಂದುವರಿದರೆ ಅದರಿಂದ ಜನಸಾಮಾನ್ಯರ ಬದುಕು ಅನೇಕ ಬಗೆಯ ಕಷ್ಟಗಳಿಗೆ, ರಾಜಿಗಳಿಗೆ ಒಳಗಾಗಬೇಕಾಗುತ್ತದೆ

ಕೊರೊನಾ ಸಾಂಕ್ರಾಮಿಕವು ನಾಳೆಗಳ ಹಾದಿಯ ಮೇಲೆ ದಟ್ಟವಾದ ಕಾರ್ಮೋಡ ಕವಿಯುವಂತೆ ಮಾಡಿದೆ. ಇದು ತಂದಿತ್ತ ನಷ್ಟಗಳ ಬಗೆಗೆ ಲೆಕ್ಕ ಇಟ್ಟವರಿಲ್ಲ. ಪ್ರತಿಯೊಬ್ಬರನ್ನೂ ಒಂದಲ್ಲ ಒಂದು ಬಗೆಯಲ್ಲಿ ಗಾಯಗೊಳಿಸಿದೆ. ಅದರ ನೋವು ತೀವ್ರವಾಗಿರುವಾಗಲೇ ಬೆಲೆ ಏರಿಕೆ ಎಂಬ ಭೂತವು ಗಾಯದ ಮೇಲೆ ಬರೆ ಎಳೆದು ಜನಸಾಮಾನ್ಯರ ಬದುಕನ್ನು ಅಸಹನೀಯಗೊಳಿಸಿದೆ.

ಜನರ ಆದಾಯದಲ್ಲಿ ತೀವ್ರ ಕುಸಿತ ಉಂಟಾಗಿದೆ. ಬಡವರು ಮತ್ತು ಮಧ್ಯಮ ವರ್ಗ, ಕೆಳ ಮಧ್ಯಮ ವರ್ಗದ ಕುಟುಂಬಗಳು ಜೀವನ ನಿರ್ವಹಣೆಗೆ ಏದುಸಿರುಬಿಡುವ ಸ್ಥಿತಿ ತಲೆದೋರಿದೆ. ಇಂತಹ ಕಷ್ಟದ ಸಂದರ್ಭದಲ್ಲಿ ಬೆಲೆ ಏರಿಕೆಯು ಅವರ ಬವಣೆಯನ್ನು ಮತ್ತಷ್ಟು ಹೆಚ್ಚಿಸುತ್ತಲೇ ಇದೆ. ಅಲ್ಪಸ್ವಲ್ಪ ಗಳಿಕೆಯನ್ನೂ ಹೀರಿಕೊಂಡು ಅವರನ್ನು ಅಸಹಾಯಕ ಸ್ಥಿತಿಗೆ ದೂಡಿದೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ಇದೆ. ಪೆಟ್ರೋಲ್ ಬೆಲೆಯು ರಾಜ್ಯದಲ್ಲಿ ಲೀಟರ್‌ಗೆ ₹ 100ರ ಗಡಿಯನ್ನು ದಾಟಿದೆ. ಡೀಸೆಲ್ ಬೆಲೆ ಕೂಡ ಲೀಟರ್‌ಗೆ ₹ 100 ಆಗುವತ್ತ ಹೆಜ್ಜೆ ಇರಿಸಿದೆ. ಇಂಧನ ಬೆಲೆ ಏರಿಕೆಯ ಪರಿಣಾಮ ಹಲವು ಕ್ಷೇತ್ರಗಳಿಗೆ ನೇರವಾಗಿ ತಟ್ಟುತ್ತದೆ. ಸರಕು ಸಾಗಣೆ ಮತ್ತು ಪ್ರಯಾಣದರ ಸಹಜವಾಗಿಯೇ ಹೆಚ್ಚಾಗುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯು ಅಗತ್ಯ ವಸ್ತುಗಳ ಪಟ್ಟಿಯಲ್ಲಿ ಬರುವ ಅಷ್ಟೂ ವಸ್ತುಗಳ ಬೆಲೆಯಲ್ಲಿ ಏರಿಕೆ ಆಗುವಂತೆ ಮಾಡುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಅಡುಗೆ ಎಣ್ಣೆ ಬೆಲೆ ಈ ಎರಡು ವರ್ಷಗಳಲ್ಲಿ ದುಪ್ಪಟ್ಟಾಗಿದೆ. ಎಣ್ಣೆಕಾಳು, ವಿವಿಧ ಧಾನ್ಯಗಳು, ಹಣ್ಣು, ಮೀನು–ಮಾಂಸದಂತಹ ತೀರಾ ಅಗತ್ಯ ವಸ್ತುಗಳ ಬೆಲೆಯಲ್ಲಿ ಕೂಡ ಹೆಚ್ಚಳ ಆಗಿದೆ. ಬೆಲೆಯಲ್ಲಿ ಕೊಂಚ ಏರಿಳಿತಗಳಾಗುವುದು ಮಾರುಕಟ್ಟೆಯ ಸಹಜ ನಿಯಮ. ಆದರೆ, ಏರಿಕೆ ವಿಪರೀತಕ್ಕೆ ಹೋದರೆ ಮತ್ತು ಅದು ನಿರಂತರ ಎಂಬಂತಾದರೆ ಭರಿಸುವುದು ಕಷ್ಟವಾಗುತ್ತದೆ. ಲಾಕ್‌ಡೌನ್‌ನಿಂದಾಗಿ ಉದ್ಯಮಗಳು, ವ್ಯಾಪಾರಸ್ಥರು, ಖಾಸಗಿ ವಲಯದ ನೌಕರರು ಬಸವಳಿದಿದ್ದಾರೆ. ಉದ್ಯೋಗನಷ್ಟ, ಸಂಬಳ ಕಡಿತಕ್ಕೆ ಒಳಗಾದ ಕುಟುಂಬಗಳ ಸ್ಥಿತಿಯನ್ನು ಈ ಬೆಲೆ ಏರಿಕೆಯು ಮತ್ತಷ್ಟು ಶೋಚನೀಯಗೊಳಿಸಿದೆ.

ಪೆಟ್ರೋಲ್, ಡೀಸೆಲ್ ಬೆಲೆ ನಿರ್ಧರಿಸುವುದು ಮಾರುಕಟ್ಟೆ ಶಕ್ತಿಗಳು ಎಂಬ ಅಧಿಕಾರಸ್ಥರ ಹೇಳಿಕೆಯು ಅರ್ಧಸತ್ಯದಿಂದ ಕೂಡಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ತಗ್ಗಿದಾಗ ಕೇಂದ್ರ ಸರ್ಕಾರವು ದೇಶಿ ಮಾರುಕಟ್ಟೆಯಲ್ಲಿ ತೈಲದ ಮೇಲಿನ ಎಕ್ಸೈಸ್ ಸುಂಕವನ್ನು ಜಾಸ್ತಿ ಮಾಡಿ, ಕಚ್ಚಾ ತೈಲದ ಬೆಲೆ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಸಿಗದಂತೆ ಮಾಡಿದ್ದೂ ಇದೆ. ಕೆಲವೆಡೆ ರಾಜ್ಯ ಸರ್ಕಾರಗಳು ಮೌಲ್ಯವರ್ಧಿತ ತೆರಿಗೆ ಪ್ರಮಾಣವನ್ನು ಹೆಚ್ಚಿಸಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಇಳಿಕೆಯ ಪ್ರಯೋಜನವು ದೇಶಿ ಮಾರುಕಟ್ಟೆಯಲ್ಲಿ ಲಭ್ಯವಾಗದಂತೆ ಮಾಡುವುದೂ ಇದೆ. ಜನರ ಬವಣೆಗಿಂತ ಬೊಕ್ಕಸ ತುಂಬಿಸಿಕೊಳ್ಳುವುದೇ ಅವರಿಗೆ ಮುಖ್ಯವಾಗಿದೆ.

ದುಡಿಮೆಗೆ ಅವಕಾಶಗಳು ಪೂರ್ತಿ ತೆರೆದುಕೊಂಡಿಲ್ಲ. ಕೊರೊನಾ ಭೀತಿ ಸಂಪೂರ್ಣವಾಗಿ ನಿವಾರಣೆ ಆಗಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರಗಳು ಮುತುವರ್ಜಿ ವಹಿಸಿ, ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಿಸಬೇಕು. ಬೆಲೆ ಏರಿಕೆಗೆ ಕಾರಣ ಏನೇ ಇದ್ದರೂ ಅದನ್ನು ಗುರುತಿಸಿ, ಪರಿಹಾರೋಪಾಯಗಳನ್ನು ಶೋಧಿಸಬೇಕು. ತೈಲೋತ್ಪನ್ನಗಳ ಬೆಲೆ ತಗ್ಗಿಸಲು ಅವಕಾಶ ಇದೆ. ಅದು ಕಡಿಮೆ ಆಗದಿದ್ದರೆ ಹಣದುಬ್ಬರ ನಿಯಂತ್ರಣಕ್ಕೆ ಬರುವುದಿಲ್ಲ ಎಂಬ ಸತ್ಯ ಎಲ್ಲರಿಗೂ ತಿಳಿದಿರುವಂತಹುದೇ. ಇಂತಹ ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ಜನರ ನೋವಿಗೆ ಮಿಡಿಯುವುದಕ್ಕಿಂತ ವರಮಾನ ಮುಖ್ಯ ಎಂದು ಭಾವಿಸುವುದು ಯಾವುದೇ ಸರ್ಕಾರಕ್ಕೆ ಶೋಭಿಸದು.

ಬೆಲೆ ಏರಿಕೆ ನಿಯಂತ್ರಣಕ್ಕೂ ತಮಗೂ ಸಂಬಂಧವೇ ಇಲ್ಲ ಎಂಬಂತೆ ಸರ್ಕಾರಗಳು ವರ್ತಿಸತೊಡಗಿರುವುದು ಸರಿಯಲ್ಲ. ಆದಾಯದ ಮೂಲಗಳೇ ಬತ್ತಿಹೋಗಿರುವ ಈಗಿನ ಕಷ್ಟದ ಸಂದರ್ಭದಲ್ಲಿ ಹಣದುಬ್ಬರ ಪ್ರಮಾಣ ತಗ್ಗಿಸುವುದನ್ನು ಆದ್ಯತೆ ಎಂದು ಸರ್ಕಾರ ಪರಿಗಣಿಸಬೇಕು. ಹಣದುಬ್ಬರ ಕಡಿಮೆ ಆಗದ ಹೊರತು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚುವುದಿಲ್ಲ. ಅದಕ್ಕೆ ಆರಂಭಿಕ ಕ್ರಮವಾಗಿ ತೈಲೋತ್ಪನ್ನಗಳ ಬೆಲೆ ಇಳಿಕೆ ಆಗಬೇಕು. ಖರೀದಿ ಶಕ್ತಿ ಕುಂದಿರುವ ಈ ಹೊತ್ತಿನಲ್ಲಿ ಬೆಲೆ ಏರಿಕೆ ಹೀಗೇ ಮುಂದುವರಿದರೆ ಅದರಿಂದ ಜನಸಾಮಾನ್ಯರ ಬದುಕು ಅನೇಕ ಬಗೆಯ ರಾಜಿಗಳಿಗೆ ಒಳಗಾಗಬೇಕಾಗುತ್ತದೆ. ಉಣ್ಣುವ ಆಹಾರ, ಖರೀದಿಸುವ ವಸ್ತುಗಳ ಗುಣಮಟ್ಟದಲ್ಲೂ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಜನಪರ ಎಂದು ಹೇಳಿಕೊಳ್ಳುವ ಸರ್ಕಾರಗಳು ಈ ಅಂಶಗಳನ್ನು ಅವಶ್ಯವಾಗಿ ಗಮನಿಸಬೇಕು.

■ ಎನ್‌. ಉದಯಕುಮಾರ್



ಈಶ್ವರ್